ಸಿ.ಸಿ.ನಂ.369/2018

ಪಿ.ಡಬ್ಲ್ಯೂ- 1

**ದಿಃ 23-12-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ವಿ ಎನ್ ವಕೀಲರಿಂದ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. ಅವರು ನನ್ನ ರೂಮೇಟ್ ಶಿವಕುಮಾರ್ ರವರ ಮುಖಾಂತರ ಪರಿಚಯವಾಗಿರುತ್ತಾರೆ. ನನ್ನ ಪ್ರಮಾಣಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿರುತ್ತವೆ. ನಾನು ವ್ಯವಸಾಯಕ್ಕೆ ಬಳಸುವ ಬೀಜಗಳ ವ್ಯವಹಾರ ಮಾಡುತ್ತೇನೆ. ನಾನು ಮಾಡುವ ವ್ಯವಹಾರಕ್ಕೆ ಯಾವುದೇ ಹೆಸರನ್ನು ಇಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ಆ ವ್ಯವಹಾರವನ್ನು ಸಣ್ಣ ಪ್ರಮಾಣಪತ್ರದಲ್ಲಿ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ನಾನು ಸದರಿ ವ್ಯವಹಾರ ಮಾಡಲು ಯಾವುದೇ ಪರವಾನಿಗೆ ಪಡೆದಿರುವುದಿಲ್ಲ. ಸದರಿ ವ್ಯವಹಾರಕ್ಕೆ ಸಂಬಂದಿಸಿ ಯಾವುದೇ ಲೆಕ್ಕದ ಪುಸ್ತಕವನ್ನು ಬರೆದಿಟ್ಟಿಲ್ಲ. ವ್ಯವಹಾರಕ್ಕೆ ಸಂಬಂದಿಸಿದಂತೆ ಆದಾಯ ತೆರಿಗೆಯಲ್ಲಿ ನಾನು ತೋರಿಸಿರುತ್ತೇನೆ. ನಾನು ಆ ವ್ಯವಹಾರವನ್ನು *2014* ನೇ ಇಸವಿಯಲ್ಲಿ ಪ್ರಾರಂಬಿಸಿ *2016* ರಲ್ಲಿ ನನಗೆ ಖಾಸಗಿ ಉದ್ಯೋಗ ದೊರೆತ ಕಾರಣ ಆ ವ್ಯವಹಾರ ವನ್ನು ನಿಲ್ಲಿಸಿರುತ್ತೇನೆ. *2016* ರಲ್ಲಿ ನಾನು ಬೆಂಗಳೂರಿನ ಷೇರು ಕಂಪನಿಯಲ್ಲಿ ಎಕ್ಸಿಕ್ಯೂಟಿವ್ ಆಗಿ ಕೆಲಸಕ್ಕೆ ಸೇರಿರುತ್ತೇನೆ. ಸದರಿ ಉದ್ಯೋಗದಿಂದ ನನ್ನ ಮೊದಲ ತಿಂಗಳ ಸಂಬಳ *20,000/-* ವರೆಗೆ ಇರಬಹುದು. ನಾನು ಎಂ ಬಿ ಎ ಫೈನಾನ್ಸ್ ಪದವಿ ವಿದ್ಯಾಭ್ಯಾಸ ಮಾಡಿರುತ್ತೇನೆ.

ನಾನು *2014-2015* ನೇ ಸಾಲಿನಿಂದ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ. ನಮ್ಮ ತಂದೆಗೆ ನಾವು *3* ಜನ ಮಕ್ಕಳಿರುತ್ತೇವೆ. ನನ್ನ ಹೆಸರಿನಲ್ಲಿ ಜಮೀನಿನ ಪಹಣಿ ಜೂನ್ *2015* ರಿಂದ ಇರುತ್ತದೆ. ನನ್ನ ಹೆಸರಿನಲ್ಲಿ ಒಟ್ಟು *4* ಬ್ಯಾಂಕ್ ಖಾತೆಗಳಿದ್ದು, ಅವುಗಳು ಎಸ್ ಬಿ ಐ, ಹೆಚ್ ಡಿ ಎಫ್ ಸಿ, ಆಕ್ಸಿಸ್ ಬ್ಯಾಂಕ್, ಕೆನರಾ ಬ್ಯಾಂಕ್ ಗಳಾಗಿರುತ್ತವೆ. ನನ್ನ ಬ್ಯಾಂಕ್ ಖಾತೆ ವಿವರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಆರೋಪಿಯು ತನ್ನ ಖಾತೆಯನ್ನು ಇಂಡಸೆಂಟ್ ಬ್ಯಾಂಕ್, ಎಸ್ ಬಿ ಐ ಮತ್ತು ಐ ಸಿ ಐ ಸಿ ಐ ಬ್ಯಾಂಕಿನಲ್ಲಿ ಇವೆ ಎಂದು ತಿಳಿಸಿದ್ದರು. ನಾನು *4, 5* ಕ್ರೆಡಿಟ್ ಕಾರ್ಡ್ ಗಳನ್ನು ಹೊಂದಿರುತ್ತೇನೆ. ನಾನು ಕ್ರೆಡಿಟ್ ಕಾರ್ಡ್ ಹೊಂದಿದ ಖಾತೆಗೆ ಆರೋಪಿ

ಹಣವನ್ನು ಡೆಪಾಸಿಟ್ ಮಾಡುತ್ತಿರಲಿಲ್ಲ. ಆರೋಪಿ ಕೆಲವೊಮ್ಮೆ ನಗದು ಮುಖಾಂತರ ನನಗೆ ಹಣ ನೀಡಿದ್ದು, ಕೆಲವೊಮ್ಮೆ ಹೆಚ್ ಡಿ ಎಫ್ ಸಿ ಬ್ಯಾಂಕಿನ ಖಾತೆಗೆ ಹಣ ಜಮಾ ಮಾಡಿರುತ್ತಾರೆ.

ನಾನು ಆರೋಪಿ ಇರುವ ಮಂಡ್ಯ ಜಿಲ್ಲೆಯ ಚಂದಗಾಡ ಗ್ರಾಮದವರ ಮನೆಗೆ ಹೋಗಿದ್ದು, ಆರೋಪಿತರ ಜಮೀನನ್ನು ನೋಡಿರುತ್ತೇನೆ. ಆರೋಪಿಯು ತಮಗೆ *20* ರಿಂದ *25* ಎಕರೆ ಇದೆ ಎಂದು ಹೇಳಿದ್ದು, ನಾವು ಜಮೀನಿಗೆ ಭೇಟಿ ಕೊಟ್ಟಿದ್ದೆನು. ಅವರಿಗೆ ಇರುವ ಜಮೀನಿನಲ್ಲಿ ಸ್ವಲ್ಪ ತೆಂಗಿನ ತೋಟ ಇದ್ದು, ಸ್ವಲ್ಪ ಖಾಲಿ ಜಾಗ ಇದ್ದು, ಉಳಿದ ಜಮೀನಿನಲ್ಲಿ ನಿಂಬೆ, ಬಾಳೆ ಬೆಳೆ ಬೆಳೆದಿದ್ದರು. ಸದರಿ ತೋಟದಲ್ಲಿನ ಬೆಳೆಯನ್ನು *20, 25* ವರ್ಷಗಳಿಂದ ಬೆಳೆದಿರಬಹುದು. ದಿಃ *16-03-2016* ರಿಂದ ದಿಃ*16-09-2016* ಮದ್ಯೆ ನಾನು *2,19,000* ರೂ.ಗಳನ್ನು ಸ್ವಲ್ಪ-ಸ್ವಲ್ಪ ದಂತೆ *91,000, 30,000, 33,000, 26,000/-* ಗಳಂತೆ ಆರೋಪಿಯ ಖಾತೆಗೆ ಜಮಾ ಮಾಡಿರುತ್ತೇನೆ. ನನ್ನ ಹೆಚ್ ಡಿ ಎಫ್ ಸಿ ಬ್ಯಾಂಕಿನ ಖಾತೆಯಿಂದ ಸದರಿ ಹಣವನ್ನು ಆರೋಪಿಯ ಖಾತೆಗೆ ಹಾಕಿದ್ದು, ಆದರೆ ಆರೋಪಿಯ ಖಾತೆಯ ವಿವರ ಈಗ ನನಗೆ ನೆನಪಿಲ್ಲ.

ನಾನು ಆರೋಪಿಗೆ ನೀಡಿದ *4,95,000* ರೂ. ಹಣವನ್ನು ನಗದಾಗಿ ಕೊಟ್ಟಿರುತ್ತೇನೆ. ಸದರಿ ಹಣ ನೀಡಿದ ನಿಖರವಾದ ದಿನಾಂಕ ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು ದಿಃ *29-06-2016* ಎಂದು ನುಡಿಯುತ್ತಾರೆ. ಆ ಮೊತ್ತದ ಹಣ ನನ್ನ ಖಾತೆಯಲ್ಲಿ ಇರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನನ್ನ ಬ್ಯಾಂಕ್ ಖಾತೆಯ ವಿವರ ಹಾಗೂ ಜಮೀನಿನ ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನಾನು ಆರೋಪಿಗೆ *10* ಲಕ್ಷ ಹಣವನ್ನು ನೀಡಿದ ಸಮಯದಲ್ಲಿ ನನ್ನ ಬಳಿ ಆ ಮೊತ್ತ ಇತ್ತು ಎನ್ನುವ ಬಗ್ಗೆ ಬ್ಯಾಂಕ್ ಖಾತೆಯ ವಿವರಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎನ್ನುವ ಸಲಹೆಗೆ ಸಾಕ್ಷಿಯು ಸ್ವಲ್ಪ ಹಣವನ್ನು ಬ್ಯಾಂಕಿನಿಂದ ಪಡೆದಿದ್ದು, ಇನ್ನು ಸ್ವಲ್ಪ ಹಣ ಅಡಿಕೆ ಭೇಣಿಯಿಂದ ಬಂದ ಹಣವಾಗಿದ್ದು, ಅದನ್ನು ಜೋಡಿಸಿ ಆರೋಪಿಗೆ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ನಾನು ಅಡಿಕೆ ಭೇಣಿ ಮಾಡಿರುವ ಬಗ್ಗೆ ದಾಖಲೆ ಇರುವುದಿಲ್ಲ, ಅದು ಮೌಖಿಕ ಒಪ್ಪಂದವಾಗಿರುತ್ತದೆ. ನಾನು ಅಡಿಕೆ ಭೇಣಿಯಿಂದ ಯಾವುದೇ ಹಣ ಪಡೆದಿರುವುದಿಲ್ಲ, ಪಡೆದಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಆರೋಪಿಗೆ ನೀಡಿ ಒಟ್ಟು ಮೊತ್ತ *17,14,000/-* ಆಗಿದ್ದು, ಅದರ ಬಗ್ಗೆ ಲೆಕ್ಕ ಪತ್ರ ಇರುವುದಿಲ್ಲ. ಸರಿ ಮೊತ್ತದಲ್ಲಿ

***1,03,500/-*** ರೂ. ಹಣವನ್ನು ನಗದು ರೂಪದಲ್ಲಿ ಆರೋಪಿ ನನಗೆ ನೀಡಿರುತ್ತಾರೆ. ಅದರಂತೆ ಉಳಿದ ಮೊತ್ತ ***16,10,500/-*** ಇರುತ್ತದೆಂದರೆ ಸರಿ.

ಆರೋಪಿಯು ***2015-2016*** ನೇ ಸಾಲಿನಲ್ಲಿ ಬೆಂಗಳೂರಿನ ಇಂಡಿಯನ್ ಎಕ್ಸ್ ಪ್ರೆಸ್ ಸರ್ಕಲ್‌ನ ಬಳಿ ಇರುವ ಏಜೆನ್ಸಿಯಲ್ಲಿ ರಿಕವರಿ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದಾರೆಂದು ತಿಳಿಸಿದ್ದರು. ನಾನು ಸಲ್ಲಿಸಿದ ಪ್ರಮಾಣಪತ್ರದ ***4*** ನೇ ಪ್ಯಾರಾದಲ್ಲಿ ಆರೋಪಿ ನೀಡಿ ಚೆಕ್ಕಿಗೆ ಸಂಬಂದಿಸಿ ಬ್ಯಾಂಕ್ ದಿಃ***22-03-2018*** ರಂದು ನೀಡಿದ ಮೆಮೋದಲ್ಲಿ ಸ್ಟಾಪ್ಡ್ ಪೇಮೆಂಟ್ ಎಂದು ನಮೂದಾಗಿದೆ ಎಂದು ತಿಳಿಸಿರುತ್ತೇವೆಂದರೆ ಸರಿ. ನಿಪಿ-***2*** ಮತ್ತು ***4*** ರಲ್ಲಿ ಸ್ಟಾಪ್ ಪೇಮೆಂಟ್ ಎಂದು ನಮೂದಾಗಿಲ್ಲ ಎಂದರೆ ಸರಿ. ನಾನು ಪಿರ್ಯಾದಿಯಲ್ಲಿ ತಿಳಿಸಿರುವ ಆರೋಪಿ ವಿಳಾಸಕ್ಕೆ ಚೆಕ್ಕು ಅಮಾನ್ಯವಾದ ನಂತರ ವಕೀಲರ ನೋಟೀಸು ಕಳುಹಿಸಿದ್ದು, ಸದರಿ ನೋಟೀಸ್ ಆರೋಪಿಗೆ ಜಾರಿಯಾಗದೇ ಇರುತ್ತದೆಂದರೆ ಸರಿ. ಆರೋಪಿಯು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ವಿಳಾಸಕ್ಕೆ ನಾನು ನೋಟೀಸನ್ನು ಕಳುಹಿಸಿರುವುದಿಲ್ಲ.

ಆರೋಪಿಯು ನನಗೆ ***2005*** ರಿಂದ ಮುಖ ಪರಿಚಯವಿದ್ದು, ***2008*** ರಿಂದ ಚೆನ್ನಾಗಿ ಪರಿಚಯವಿರುತ್ತಾರೆ. ***2005*** ರಲ್ಲಿ ಆರೋಪಿ ಏನು ಉದ್ಯೋಗ ಮಾಡುತ್ತಿದ್ದರೆಂದು ಗೊತ್ತಿಲ್ಲ. ಆದರೆ ***2008*** ರಲ್ಲಿ ರಿಕವರಿ ಆಫೀಸರ್ ಆಗಿ ಕೆಲಸ ಮಾಡುತ್ತಿರುವುದು ಗೊತ್ತಾಯ್ತು. ನನ್ನ ರೂಮೇಟ್ ಶಿವಕುಮಾರ್ ರವರ ರೂಮಿಗೆ ಆರೋಪಿ ಬಂದು ಹೋಗುತ್ತಿದ್ದು, ಅವರಿಂದ ನನಗೆ ಪರಿಚಯವಾಗಿರುತ್ತಾರೆ. ದಿಃ***18-02-2015*** ರಿಂದ ದಿಃ***06-06-2015*** ರವರೆಗೆ ನಾನು ಏನು ಕೆಲಸ ಮಾಡುತ್ತಿರಲಿಲ್ಲ. ನಾನು ಪಿರ್ಯಾದಿಯಲ್ಲಿ ಹೇಳಿದ ನನ್ನ ವಿಳಾಸಕ್ಕೆ ಸಂಬಂದಿಸಿ ಆದಾರ್ ಕಾರ್ಡ್, ಓಟರ್ ಐಡಿ, ಬಿ ಪಿ ಎಲ್ ಕಾರ್ಡ್ ಹೊಂದಿರುತ್ತೇನೆ. ಸಾಕ್ಷಿ ಮುಂದುವರೆದು ಬಿ ಪಿ ಎಲ್ ಕಾರ್ಡ್ ಅಲ್ಲ, ಆದಾರ್ ಕಾರ್ಡ್ ಎಂದು ನುಡಿದಿರುತ್ತೇನೆಂದು ನುಡಿಯುತ್ತಾರೆ. ನನಗೆ ಊರಿನ ಬಗ್ಗೆ ಅಷ್ಟು ಗೊತ್ತಿರುವುದಿಲ್ಲ, ಸಾಕ್ಷಿ ಮುಂದುವರೆದು ಎ ಪಿ ಎಲ್ ಕಾರ್ಡ್ ಇರುತ್ತದೆಂದು ನುಡಿಯುತ್ತಾರೆ.

ಆರೋಪಿ ತನ್ನ ಹೆಸರಿನಲ್ಲಿರುವ ಇಂಡಸ್ ಲ್ಯಾಂಡ್ ಬ್ಯಾಂಕಿನ ಉಳಿತಾಯ ಖಾತೆ ***159916864900*** ಖಾತೆಯಿಂದ ನನ್ನ ಕ್ರೆಡಿಟ್ ಕಾರ್ಡ್ ಖಾತೆಗೆ ದಿಃ***19-3-2016*** ರಂದು ***1,30,000/-*** ಗಳನ್ನು ಜಮಾ ಮಾಡಿದ್ದು, ದಿಃ***26-4-2016*** ರಂದು ***71,645/-***ಗಳನ್ನು, ದಿಃ***25-05-2016*** ರಂದು ***2,17,960/-*** ಗಳನ್ನ, ದಿಃ***25-07-2016*** ರಂದು ***90,000/-*** ರೂ.ಗಳನ್ನು, ದಿಃ***21-09-2016*** ರಂದು ***5,000/-*** ರೂ.ಗಳನ್ನು

ದಿ:*21-9-2016* ರಂದು *1,25,000/-* ರೂ.ಗಳನ್ನು ಹೀಗೆ ಒಟ್ಟಾಗಿ *6,39,605/-* ಗಳನ್ನು ನನ್ನ ಖಾತೆಗೆ ಜಮಾ ಮಾಡಿರುತ್ತಾರೆಂದರೆ ಸಾಕ್ಷಿಯು ಅದನ್ನು ಪರಿಶೀಲಿಸಿ ನೋಡಬೇಕೆಂದು ನುಡಿಯುತ್ತಾರೆ. ನನ್ನ ಆ್ಯಕ್ಸಿಸ್ ಬ್ಯಾಂಕಿನ ಉಳಿತಾಯಖಾತೆ ಸಂ: *913010051085515* ಆಗಿರುತ್ತದೆಂದರೆ ಸಾಕ್ಷಿಯು ಕೊನೆಯ ಮೂರು ಸಂಖ್ಯೆಗಳಾದ *515* ಎಂದು ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ನನ್ನ ಈ ಅಕೌಂಟಿಗೆ ಆರೋಪಿಯು ದಿ:*04-4-2016* ರಂದು *50,000/-,* ದಿ:*13-5-2016* ರಂದು *20,700/-,* ದಿ:*17-6-2016* ರಂದು *9,755/-,* ದಿ:*09-6-2016* ರಂದು *20,000/-* ಗಳನ್ನು ಎ ಟಿ ಎಂ ವರ್ಗಾವಣೆ ಮೂಲಕ ಜಮಾ ಮಾಡಿರುತ್ತಾರೆಂದರೆ ಸಾಕ್ಷಿಯು ಅಕೌಂಟ್ ನಂಬರನ್ನು ಪರಿಶೀಲನೆ ಮಾಡಬೇಕೆಂದು ನುಡಿಯುತ್ತಾರೆ. ಆರೋಪಿಯು ತನಗೆ ಸೇರಿದ ಆಕ್ಸಿಸ್ ಬ್ಯಾಂಕ್ ಖಾತೆ ಅಕೌಂಟ್ ನಂ:*915010000159919* ಖಾತೆಯಿಂದ ದಿ: *24-06-2016* ರಂದು *10,000,* *11-7-2016* ರಂದು *5,000,* ದಿ:*25-7-2016* ರಂದು *5,000,* ದಿ:*06/08/2016* ರಂದು *18,740/-,* ದಿ:*08-08-2016* ರಂದು *1,000,* ದಿ:*10/8/2016* *93,000,* *21/9/2016* ರಂದು *21,000,* ದಿ:*04/10/2016* ರಂದು *18,000,* ದಿ:*05/10/2016* ರಂದು *5,000* ದಿ:*07/10/2016* ರಂದು *8,000,* ದಿ:*10/10/2016* ರಂದು *41,000,* ದಿ:*10/10/2016* ರಂದು *10,450/-* ಚಿ, *18/10/2016* ರಂದು *1,000,* ದಿ:*25/10/2016* ರಂದು *300,* ಹೀಗೆ ಒಟ್ಟು ಮೊತ್ತ *3,82,945/-* ಗಳನ್ನು ನನ್ನ ಖಾತೆಗೆ ದಿ:*04-4-2016* ರಿಂದ ದಿ:*25/10/2016* ರವರೆಗೆ ನನ್ನ ಖಾತೆಗೆ ಎ ಟಿ ಎಂ ಟ್ರಾನ್ಸಫರ್, ಎಂ ಒ ಬಿ/ಟಿ ಪಿ ಎಫ್ ಟಿ, ನೆಫ್ಟ್, ಈ ರೀತಿಯಾಗಿ ನನ್ನ ಖಾತೆಗೆ ವರ್ಗಾವಣೆ ಮಾಡಿರುತ್ತಾರೆಂದರೆ ಸಾಕ್ಷಿಯು ಪರಿಶೀಲನೆ ಮಾಡಬೇಕೆಂದು ನುಡಿಯುತ್ತಾರೆ.

ದಿ:*19-3-2016* ರಿಂದ *21-9-2016* ರವರೆಗೆ ನನ್ನ ಕ್ರೆಡಿಟ್ ಕಾರ್ಡ್ ಖಾತೆಗೆ ಆರೋಪಿ ತನ್ನ ಉಳಿತಾಯ ಖಾತೆ *159916864900* ಖಾತೆಯಿಂದ ಒಟ್ಟು *6,39,605/-* ಗಳನ್ನು, ಅದೇ ರೀತಿ ಆರೋಪಿಯು ನನ್ನ ಹೆಸರಿಗೆ ಸಿ ಟಿ ಬ್ಯಾಂಕಿನಲ್ಲಿ ತನ್ನ ಮೊಬೈಲ್ ಸಂಖ್ಯೆ ಮೂಲಕ ದಿ:*08/06/2016* ರಂದು *1,00,700/-* ಗಳನ್ನು ಜಮಾ ಮಾಡಿರುತ್ತಾರೆಂದರೆ ಸಾಕ್ಷಿಯು ಪರಿಶೀಲನೆ ಮಾಡಿ ಹೇಳಬೇಕೆಂದು ನುಡಿಯುತ್ತಾರೆ. ಸಾಮಾನ್ಯವಾಗಿ ಹಣ ಸಂದಾಯ ಮಾಡಿದವರಿಗೆ ಕೌಂಟರ್ ಫೈಲನ್ನು ನೀಡುತ್ತಾರೆಂದರೆ ಸರಿ. ಸಾಕ್ಷಿಗೆ ಮೂರು ದಿ:*07-8-2016* ಹಾಗೂ ದಿ:*11-7-2016,* ದಿ:*06-08-2016* ರ ರಶೀದಿ ತೋರಿಸಲಾಗಿ ಅದರಂತೆ ಆರೋಪಿಯು ನನ್ನ ಖಾತೆಗೆ *1,00,000,* *1,00,600/-,* *38,500/-*

ಹಣವನ್ನು ಜಮಾ ಮಾಡಿರುತ್ತಾರೆಂದು ಕೇಳಿರುವ ಪ್ರಶ್ನೆಗೆ ಸಾಕ್ಷಿಯು ರಶೀದಿ ನೋಡಿ ರಶೀದಿಯಲ್ಲಿನ ***8818*** ನನ್ನ ಖಾತೆಯ ಕೊನೆ ನಂಬರ್ ಎಂದು ನುಡಿದಿದ್ದು ಸದರಿ ಸಂಖ್ಯೆಯನ್ನು ಗುರುತಿಸುವಷ್ಟರ ಮಟ್ಟಿಗೆ ರಶೀದಿಗಳನ್ನು ಕ್ರಮವಾಗಿ ನಿಡಿ-*1* ರಿಂದ *3* ಎಂದು ಗುರುತಿಸಲಾಯ್ತು. ಖಾತೆಯಿಂದ ಖಾತೆಗೆ ***10,76,550/-*** ಹಾಗೂ ***4*** ಬಾರಿ ***3,45,200/-*** ಗಳಂತೆ ಹಣ ಜಮಾ ಮಾಡಿರುತ್ತಾರೆಂದರೆ ಸಾಕ್ಷಿಯು ಖಾತೆಯನ್ನು ಪರಿಶೀಲಿಸಿ ನೋಡಬೇಕೆಂದು ನುಡಿಯುತ್ತಾರೆ. ಆರೋಪಿಯು ನನ್ನ ಖಾತೆಗೆ ಒಟ್ಟು ***14,21,750/-*** ಗಳನ್ನು ಜಮಾ ಮಾಡಿದ್ದು, ಯಾವುದೇ ರೀತಿಯ ಬಾಕಿ ಇರುವುದಿಲ್ಲ ಎಂದರೆ ಸಾಕ್ಷಿಯು ಖಾತೆಯನ್ನು ಪರಿಶೀಲಿಸಿ ನೋಡಬೇಕೆಂದು ನುಡಿಯುತ್ತಾರೆ.

(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಕ್ತಾಯವಾಗಿದ್ದರಿಂದ ಮುಂದುವರೆದ ಪಾಟೀ ಸವಾಲಿನಲ್ಲಿ ಸಮಯಾವಕಾಶ ನೀಡಿ ಮುಂದೂಡಲಾಯ್ತು)

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***